ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಮಂಜೂರಾತಿ ಆಗಿರುವ ಕಾಮಗಾರಿಗಳ ಪ್ರಾರಂಭ

1913 (2339) ಶ್ರೀ ಬಸವರಾಜು ಹೆಚ್.ಸಿ. (ಪಿಸಿಯಾಪಟ್ಟಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಪಟ್ಟಣ ಮತಕ್ಷೇತ್ರದಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಆರ್.ಐ.ಡಿ.ಎಫ್ 3 ರಲ್ಲಿ ಕೊಟ್ಟ-ಎನ್.ಇ.ಆಯಿಲ್ ಪ್ಲಾಂಟೇಷನ್ ಹಾಗೂ ಹಿಟ್ಟಿಹೆಬ್ಬಾಗಿಲುಮಾಕೋಡು ರಸ್ತೆಗಳನ್ನು ಡಾಂಬರೀಕರಣಕ್ಕಾಗಿ ಆಯ್ಕೆ ಮಾಡಲಾಗಿದ್ದು, ಆದರೆ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಎಷ್ಟು ಅವಧಿಯಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು (ವಿವರ ನೀಡುವುದು):

ಈ) ಅದೇ ಮಂಡಳಿ ವತಿಯಿಂದ ಆರ್.ಐ.ಡಿ.ಎಫ್-6 ಹಾಗೂ ಆರ್.ಐ.ಡಿ.ಎಫ್-7 ರಲ್ಲಿ ಬಿ.ಎಂ.ರಸ್ತೆಯಿಂದ ಬೆಳತೂರು-ಕೆ.ಎನ್.ಎಂ.ರಸ್ತೆ ಹಾಗೂ ಹೆಚ್.ಹೆಚ್.ಎ.ಪಿ.ಕೆ.ಕೆ. ಬಾರ್ಸೆಕುಡಕೂರು ಎನ್.ಶೆಟ್ಟಿಹಳ್ಳಿವರೆಗಿನ ರಸ್ತೆಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರತಿರುವುದಾಗಿ ತಿಳಿದು ಬಂದಿದ್ದು ಕಾಮಗಾರಿಯನ್ನು ತಹಲ್‌ವರೆವಿಗೆ ಪ್ರಾರಂಭಿಸದಿರಲು ಕಾರಣವೇನು:

ಉ) ಈ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು:

ಊ) ಈ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಎಷ್ಟು:

ಋ) ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಕೊಪ್ಪ-ಎನ್.ಇ.ಆಯಿಲ್ ಪ್ಲಾಂಟೇಷನ್ ಹಳ್ಳಿ ರಸ್ತೆ ಮತ್ತು ಹಿಟ್ಟಿಹೆಬ್ಬಾಗಿಲು -ಮಾಕೋಡು ಹಳ್ಳಿ ರಸ್ತೆಗಳ ಕೆಲವು ಸರಪಳಿಗಳು ಅಂದಾಜು ತಯಾರಿಕೆಯ ನಂತರ ನಬಾರ್ಡ್‌ನ ಅನುಮೋದನೆ ಮತ್ತು ಗುತ್ತಿಗೆ ನಿಗಧಿಪಡಿಸುವ ಸಮಯದಲ್ಲಿ ಮಳೆಯಿಂದ ಹಾನಿಗೊಳಗಾಗಿದ್ದು, ಇದನ್ನು ದುರಸ್ತಿಪಡಿಸದೆ ಅನುಮೋದಿತ ಅಂದಾಜಿನಂತೆ ಕಾರ್ಯ ನಿರ್ವಹಿಸುವುದು ಸಾಧ್ಯವಾಗದ ಕಾರಣ ಈ ಎರಡು ರಸ್ತೆಗಳನ್ನು ಕ್ರಮವಾಗಿ 4ಕಿಮೀ ಮತ್ತು 5.80 ಕಿಮೀ ಮಾತ್ರ ಅಭಿವೃದ್ಧಿ ಪಡಿಸಿ ಕಾಮಗಾರಿಗಳನ್ನು ಮುಕ್ತಾಯಮಾಡಲಾಗಿದೆ.

ಈ ಎರಡು ರಸ್ತೆಗಳ ಹಾಳಾದ ಭಾಗಗಳ ಅಭಿವೃದ್ಧಿಗೆ ಕಾರ್ಯದರ್ಶಿ, ಎಂ.ಎ.ಡಿ.ಬಿ. ಇವರ ಸೂಚನೆಯಂತೆ ಕ್ರಮವಾಗಿ ರೂ. 25.00 ಲಕ್ಷ ಮತ್ತು 50.00 ಲಕ್ಷಕ್ಕೆ ಅಂದಾಜುಗಳನ್ನು ತಯಾರಿಸಿ ಎಂ.ಎ.ಡಿ.ಬಿ.ಯ ಅನುಮೋದನೆ ಪಡೆಯಲು ದಿ 3-4-02 ಮತ್ತು 21-6-2002 ರಂದು ಕಳುಹಿಸಲಾಗಿದೆ.

ಇ) ಮೇಲೆ ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಕಾಮಗಾರಿಗಳಿಗೆ ಮಲೆನಾಡು ಪ್ರದೇಶಾಭಿವೃದ್ದಿ ಮಂಡಳಿಯು ಇನ್ನೂ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.

ಉ) ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಗ್ರಾಮ ಸಹಾಯಕರನ್ನು ಖಾಯಂಗೊಳಿಸುವ ಕುರಿತು

1915 (2510) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಗ್ರಾಮ ಸೇವಕರು (ಗ್ರಾಮ ಸಹಾಯಕ) ಸೇವೆ ಸಲ್ಲಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

ಆ) ಇವರುಗಳೆಲ್ಲಾ ಯಾವಾಗಿನಿಂದ ಸೇವೆ ಸಲ್ಲಿಸುತ್ತಿದ್ದಾರೆ;

ಇ) ಇವರುಗಳನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಖಾಯಂಗೊಳಿಸಲಾಗುವುದು;

ಉ) ಎಷ್ಟು ಜನರನ್ನು ಖಾಯಂಗೊಳಿಸಲಾಗುವುದು; ಎಷ್ಟು ಹಂತಗಳಲ್ಲಿ ಖಾಯಂಗೊಳಿಸಲಾಗುವುದು (ವಿವರ ನೀಡುವುದು)?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 9665 ಗ್ರಾಮ ಸಹಾಯಕರುಗಳು ಸೇವೆ ಸಲ್ಲಿಸುತ್ತಿದ್ದಾರೆ.

ಜಿಲ್ಲಾವಾರು ಮಾಹಿತಿ ಅನುಬಂಧ -1 ರಲ್ಲಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಕಂಇ 3 ಎಂವಿಎಸ್ 77, ದಿನಾಂಕ : 16-9-1978 ಮತ್ತು ಆದೇಶ ಸಂಖ್ಯೆ ಕಂಇ 82 ಎಂವಿಎಸ್ (1) 82, ದಿನಾಂಕ: 23-9-1982ರಲ್ಲಿ ಒಟ್ಟು 10450 ಗ್ರಾಮ ಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದ್ದು, ಆ ನಂತರದಿಂದ ಆ ಹುದ್ದೆಗಳಲ್ಲಿ ಗ್ರಾಮ ಸಹಾಯಕರುಗಳು ಸೇವೆ ಸಲ್ಲಿಸುತ್ತಿದ್ದಾರೆ.

ಇ) ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ

ಈ) - ″-

ಉ) - ″-

ಅನುಬಂಧ -1

ಬೆಂಗಳೂರು ವಿಭಾಗ:

ಬೆಂಗಳೂರು ನಗರ	-	192
ಬೆಂಗಳೂರು ಗ್ರಾಮಾಂತರ	-	424
ಶಿವಮೊಗ್ಗ	-	170